5) ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ನಿಗಮ . – ಬಸ್ ನಿಲ್ದಾಣಗಳು

1) ಕಮಲನಗರ 2) ಕಿನ್ನಾಳ 3) ಕಾರಟಗಿ
4) ನೆಲಚರವು 5) ಕೂಡ್ಲಿಗಿ 6) ಹಗರಿಬೊಮ್ಮನಹಳ್ಳಿ
7) ಮಾನ್ವಿ

1554 (1945) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) – ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2005–06 ಮತ್ತು 2006–07 ರಲ್ಲಿ ರಾಜ್ಯದಲ್ಲಿ ಯಾವ ಯಾವ ಬಂದರು ಅಭಿವೃದ್ಧಿಗೆ ಎಷ್ಟೆಷ್ಟು ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ (ಬಂದರುವಾರು ಮಾಹಿತಿ ನೀಡುವುದು)

ಆ) 2005–06 ಮತ್ತು 2006–07 ರಲ್ಲಿ ಉತ್ತರ ಕನ್ನಡ ಜಿಲ್ಲೆಗೆ ಬಿಡುಗಡೆಗೊಂಡ ಅನುದಾನದಲ್ಲಿ ಎಲ್ಲೆಲ್ಲಿ ಮತ್ತು ಯಾವ ಯಾವ ಉದ್ದೇಶಗಳಿಗಾಗಿ ಖರ್ಚು ಮಾಡಲಾಗಿದೆ,

ಇ) ಉತ್ತರ ಕನ್ನಡ ಜಿಲ್ಲೆಯಲ್ಲಿ ಸಮುದ್ರ ಕೊರೆತವನ್ನು ತಡೆಗಟ್ಟಲು ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ,

ಈ) 2005–06 ಮತ್ತು 2006–07 ಕ್ಕೆ ಸಮುದ್ರ ಕೊರೆತ ತಡೆಗಟ್ಟಲು ಈ ಜಿಲ್ಲೆಗೆ ಬಿಡುಗಡೆಗೊಂಡ ಅನುದಾನವನ್ನು ಹಾಗೂ ಅದರಲ್ಲಿ ಎಲ್ಲೆಲ್ಲಿ ಮತ್ತು ಎಷ್ಟೆಷ್ಟು ಹಣವನ್ನು ವೆಚ್ಚ ಮಾಡಲಾಗಿದೆ (ವಿವರವಾದ ಮಾಹಿತಿ ಒದಗಿಸುವುದು)

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) **2005–2006** ನೇ ಸಾಲಿನಲ್ಲಿ

(ರೂ ಲಕ್ಷಗಳಲ್ಲಿ)

ವಿವರಗಳು	ಮಂಜೂರಾದ ಅನುದಾನ	ವೆಚ್ಚ
ಕಾರವಾರ ಬಂದರು ಅಭಿವೃದ್ಧಿ	200 00	272 65
ಮಂಗಳೂರು ಬಂದರು ಅಭಿವೃದ್ಧಿ	225 00	131 74
ಹೊನ್ನಾವರ ಬಂದರು ಅಭಿವೃದ್ಧಿ	4 00	4 00
ಕುಂದಾಪುರ ಬಂದರು ಅಭಿವೃದ್ಧಿ	4 00	4 00
ಬೆಲೆಕೇರಿ ಬಂದರು ಅಭಿವೃದ್ಧಿ	1 00	1 00
ತದಡಿ ಬಂದರು ಅಭಿವೃದ್ಧಿ	10 00	10 00
ಭಟ್ಕಳ ಬಂದರು ಅಭಿವೃದ್ಧಿ	4 00	4 00
ಹಂಗಾರಕಟ್ಟಾ ಬಂದರು ಅಭಿವೃದ್ಧಿ	1 00	1 00
ಮಲ್ಪೆ ಬಂದರು ಅಭಿವೃದ್ಧಿ	96 00	96 00
ಒಳನಾಡು ಜಲಸಾರಿಗೆ	30 00	48 26
	575 00	**572 65**

ಅ) **2006–2007 ನೇ ಸಾಲಿನಲ್ಲಿ**

(ರೂ ಲಕ್ಷಗಳಲ್ಲಿ)

ವಿವರಗಳು	ಮಂಜೂರಾದ ಅನುದಾನ	ವೆಚ್ಚ
ಕಾರವಾರ ಬಂದರು ಅಭಿವೃದ್ಧಿ	260 00	256 00
ಮಂಗಳೂರು ಬಂದರು ಅಭಿವೃದ್ಧಿ	230 00	230 00
ಹೊನ್ನಾವರ ಬಂದರು ಅಭಿವೃದ್ಧಿ	4 00	4 00
ಕುಂದಾಪುರ ಬಂದರು ಅಭಿವೃದ್ಧಿ	4 00	4 00
ಬೆಲೆಕೇರಿ ಬಂದರು ಅಭಿವೃದ್ಧಿ	1 00	1 00
ತದಡಿ ಬಂದರು ಅಭಿವೃದ್ಧಿ	10 00	10 00
ಭಟ್ಕಳ ಬಂದರು ಅಭಿವೃದ್ಧಿ	4 00	4 00
ಹಂಗಾರಕಟ್ಟಾ ಬಂದರು ಅಭಿವೃದ್ಧಿ	1 00	1 00
ಮಲ್ವೆ ಬಂದರು ಅಭಿವೃದ್ಧಿ	91 00	33 40
ಒಳನಾಡು ಜಲಸಾರಿಗೆ	95 00	75 00
	700 00	**618 40**

ಆ) **2005–06 ನೇ ಸಾಲಿನಲ್ಲಿ**

ಕಾರವಾರ ಬಂದರು ಅಭಿವೃದ್ಧಿಯಡಿಯಲ್ಲಿ ಸಮುದ್ರ ಕೊರೆತ ಅಲೆತಡೆಗೋಡೆ ನಿರ್ಮಾಣ, ಕಟ್ಟಡಗಳು, ಬಂದರು ಪ್ರದೇಶದೊಳಗೆ ರಸ್ತೆ ಹಾಗೂ ಪ್ಲಾಟ್‌ಫಾರ್ಮ್, ಬಂದರು ಭದ್ರತಾ ಸಂರಕ್ಷಣೆ ಕಾಮಗಾರಿಗಳನ್ನು ನಿರ್ವಹಿಸಲಾಗಿದೆ

ಹೊನ್ನಾವರ ಬಂದರು ಪ್ರದೇಶದಲ್ಲಿ ಕಛೇರಿ ಕಟ್ಟಡ ವಾಹನ ಶೆಡ್ ರಸ್ತೆ ಕಾಮಗಾರಿಗಳಿಗಾಗಿ ಖರ್ಚು ಮಾಡಲಾಗಿದೆ

ಬೆಲೆಕೇರಿ ಬಂದರಿನಲ್ಲಿ ಗಾರ್ಡ್ ಸ್ಟೋವ್ ಹಾಕಲು ಖರ್ಚು ಮಾಡಲಾಗಿದೆ

ತದಡಿ ಬಂದರಿನಲ್ಲಿ ಬಂದರು ಕಛೇರಿಯು ಆವರಣ ಗೋಡೆ, ಕಾಂಕ್ರೀಟ್ ನೆಲಹಾಸು, ರಸ್ತೆ ನಿರ್ಮಾಣ ಇತ್ಯಾದಿ ಕಾಮಗಾರಿಗಳನ್ನು ನಿರ್ವಹಿಸಲಾಗಿದೆ ಭಟ್ಕಳ್ ಬಂದರು ರ್‍ಯಾಂಪ್ ಹಿಂದುಗಡೆ ನೆಲಹಾಸು ಗಟ್ಟಿ ಮಾಡುವುದು, ನೆಲಕ್ಕೆ ಕಾಂಕ್ರೀಟ್ ಹಾಕುವುದು ಇತ್ಯಾದಿ ಕಾಮಗಾರಿ ಕೈಗೊಳ್ಳಲಾಗಿದೆ

2006–2007 ನೇ ಸಾಲಿನಲ್ಲಿ

ಕಾರವಾರ ಬಂದರು ಪ್ರದೇಶದಲ್ಲಿ ರಡಾರ್ ಸ್ಟೇಶನ್ ನಿರ್ಮಾಣ, ಕಾಂಕ್ರೀಟ್ ರಸ್ತೆ, ಆಡಳಿತ ಕಛೇರಿ ಕಟ್ಟಡ ವಿಸ್ತರಣೆ, ಶಿಪ್ ವಾಚ್ ಟಾವರ್ ನಿರ್ಮಾಣಕ್ಕಾಗಿ ವೆಚ್ಚ ಮಾಡಲಾಗಿದೆ

ಹೊನ್ನಾವರ ಬಂದರಿನಲ್ಲಿ ಬಂದರು ಧಕ್ಕೆ ಮತ್ತು ರಸ್ತೆ ದುರಸ್ತಿ ಕಾಮಗಾರಿ

ಭಟ್ಕಳ್ ಬಂದರು ವಾರ್ಫ್ ಸುಧಾರಣೆ ಇತ್ಯಾದಿ ಕಾಮಗಾರಿ ಕೈಗೊಳ್ಳಲಾಗಿದೆ

ಇ) ತಾಂತ್ರಿಕ ಪರಿಣಿತರ ಸಮಿತಿ ಸಲಹೆಯಂತೆ ಹಾಗೂ Central Water Power Research Station, Pune (C W P R S) ಇವರು ಅಧ್ಯಯನ ಮಾಡಿ ನೀಡಿರುವ ವಿನ್ಯಾಸದಂತೆ ಕಲ್ಲಿನಿಂದ ತಡೆಗೋಡೆ ನಿರ್ಮಿಸಲಾಗುತ್ತಿದೆ ಮಳೆಗಾಲದಲ್ಲಿ ಸಾರ್ವಜನಿಕರ ಆಸ್ತಿ–ಪಾಸ್ತಿಯ ತುರ್ತು ಸಂರಕ್ಷಣೆ ಕೈಗೊಳ್ಳಲು ಮರಳು ಚೀಲಗಳಿಂದ ಬಂಡಿಂಗ್ ನಿರ್ಮಿಸಿ ಸಮುದ್ರ ಕೊರೆತವನ್ನು ತಡೆಗಟ್ಟಲಾಗುತ್ತಿದೆ

ಈ) **2005–2006 ನೇ ಸಾಲಿನಲ್ಲಿ**

ರೂ ಲಕ್ಷಗಳಲ್ಲಿ

	ಬಿಡುಗಡೆಯಾದ ಅನುದಾನ	ಖರ್ಚು
ಉತ್ತರ ಕನ್ನಡ ಜಿಲ್ಲೆಯ ಕಾರಾವಾರ, ಅಂಕೋಲಾ, ಕುಮಟಾ, ಹೊನ್ನಾವರ	154 52	154 52

ಮತ್ತು ಭಟ್ಕಳ, ಕರಾವಳಿ ಗುಂಟಿ ಒಟ್ಟಿಗೆ
995 ಮೀಟರನಷ್ಟು ಉದ್ದದ ಪ್ರದೇಶದಲ್ಲಿ
ಸಮುದ್ರ ಕೊರೆತ ತಡೆ ಕಾಮಗಾರಿ
ನಿರ್ವಹಿಸಿದೆ

ಈ) **2006–2007 ನೇ ಸಾಲಿನಲ್ಲಿ**

ರೂ ಲಕ್ಷಗಳಲ್ಲಿ

	ಬಿಡುಗಡೆಯಾದ ಅನುದಾನ	ಖರ್ಚು
ಉತ್ತರ ಕನ್ನಡ ಜಿಲ್ಲೆಯ ಕಾರಾವಾರ, ಅಂಕೋಲಾ, ಕುಮಟಾ, ಹೊನ್ನಾವರ ಮತ್ತು ಭಟ್ಕಳ, ಕರಾವಳಿ ಗುಂಟಿ ಒಟ್ಟಿಗೆ 1383 ಮೀಟರನಷ್ಟು ಉದ್ದದ ಪ್ರದೇಶದಲ್ಲಿ ಸಮುದ್ರ ಕೊರೆತ ತಡೆ ಕಾಮಗಾರಿ ನಿರ್ವಹಿಸಿದೆ ಮತ್ತು ಹಿಂದಿನ ಸಾಲಿನ ಬಾಕಿ ಬಿಲ್ಲು ಪಾವತಿಸಿದೆ	365 00	365 00

1556 (1947) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) .– ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅದರಲ್ಲೂ ಮುಖ್ಯವಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ 2005–06 ಮತ್ತು 2006–07 ರ ಸಾಲಿನಲ್ಲಿ ಒಟ್ಟು ಎಷ್ಟು ಕಿ ಮೀ ರಸ್ತೆಗಳನ್ನು ಮೇಲ್ದರ್ಜೆಗೇರಿಸಲಾಗಿದೆ ಹಾಗೂ ಅವು ಯಾವುವು (ತಾಲ್ಲೂಕಾವಾರು ಮಾಹಿತಿ ನೀಡುವುದು),